ಮೂಲ ದಾವಾ ನಂಃ 12/2020

ಪಿ.ಡಬ್ಲ್ಯೂಃ 05

( ಇಂದು ದಿನಾಂಕಃ 06.12.2024 ರಂದು ಪಿ ಡಬ್ಲು 5 ರವನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಆರ್. ಎಸ್. ಎಚ್. ಜಿ. ರವರಿಂದಃ**

ನನಗೆ ಮದುವೆಯಾಗಿದೆ, ಮದುವೆಯಾಗಿ 35 ವರ್ಷಗಳು ಆಗಿವೆ. ನನ್ನ ಗಂಡನ ಮನೆ ಬೊಬಶಿಟ್ಟಾಧಲ್ಲಿದೆ. ಅದು ಹೊಸಾಳಿಯಿಂದ 2-3 ಕಿ ಮೀ ದೂರ ಇದೆ. ನಮಗೆ ನಮ್ಮದೇ ಸ್ವಂತ ಜಮೀನುಗಳು ಇವೆ. ನಮ್ಮ ಜಮೀನನ್ನು ನಾವೇ ಸಾಗುವಳಿ ಮಾಡಿಕೊಂಡು ಇದ್ದೇವೆ. ಕೋಯರ್ ರವರು ಜೀವಂತ ಇರುವುದಿಲ್ಲ. ಅವರು ತೀರಿಕೊಂಡು 50 ವರ್ಷ ಮೇಲ್ಪಟ್ಟು ಆಗಿರುತ್ತದೆ. ಪುಂಡಲಿಕ ಇವರು ಜೀವಂತ ಇರುವುದಿಲ್ಲ. ಅವರು ತೀರಿಕೊಂಡು 25 ವರ್ಷಗಳಾಗಿವೆ. ಅವರ ಹೆಂಡತಿ ಕಸ್ತೂರಿ. ಪುಂಡಲಿಕನಿಗೆ ನಾಲ್ಕು ಮಂದಿ ಗಂಡು ಮಕ್ಕಳು, ಮೂರು ಮಂದಿ ಹೆಣ್ಣು ಮಕ್ಕಳು, ಅವರೆಲ್ಲಾ ತೀರಿಕೊಂಡಿದ್ದಾರೆ. ಯಾವ ವಿಷಯಕ್ಕಾಗಿ ಈ ದಾವೆ ಸಲ್ಲಿಸಲಾಗಿದೆ ಎಂದರೆ ಜಮೀನಿನ ಬಗ್ಗೆ ಸಲ್ಲಿಸಲಾಗಿದೆ ಅಂತಾ ಉತ್ತರಿಸುತ್ತಾರೆ. ಯಾವ ಉದ್ದೇಶಕ್ಕಾಗಿ ಈ ದಾವೆ ಸಲ್ಲಿಸಲಾಗಿದೆ ಎಂದರೆ ಜಾಗ ನಮಗೆ ಬೇಕು ಅಂತಾ ಸಲ್ಲಿಸಲಾಗಿದೆ ಅಂತಾ ಉತ್ತರಿಸುತ್ತಾರೆ. ನಮಗೆ ಅಂದರೆ ಈ ದಾವೆ ಸಲ್ಲಿಸಿದ ಎಲ್ಲರಿಗೂ ಜಾಗ ಬೇಕು ಅಂತಾ ಉತ್ತರಿಸುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಲು 1 ನೇ ವಾದಿ ಮಾಹಿತಿ ಕೊಟ್ಟಿರುತ್ತಾರೆ. ಕೋಯರ್ ರವರಿಗೆ ಪುಂಡಲಿಕನ ಸಹೋದರಿ ಮಗಳಾಗಿದ್ದಳು ಅಂತಾ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೋಯರ್ ರವರಿಗೆ ಯಾವದೇ ಹೆಣ್ಣು ಮಕ್ಕಳು ಇರಲಿಲ್ಲ ಎಂದರೆ ಸರಿಯಲ್ಲ. ಅವರ ಸಂಬಂಧದ ಬಗ್ಗೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಬರೆದಿರುವುದೆಲ್ಲಾ ಸುಳ್ಳು ಎಂದರೆ ಸರಿಯಲ್ಲ. ಪುಂಡಲಿಕ ರವರ ಮನೆಯಲ್ಲಿ ಯಾವ ಕಾರ್ಯಕ್ರಮಗಳು ನಡೆಯುತ್ತಿದ್ದವು ಎಂದರೆ ಚೌತಿ ಮತ್ತು ದಸರಾ ಮಾಡುತ್ತಿದ್ದರು ಅಂತಾ ಉತ್ತರಿಸುತ್ತಾರೆ. ನಾನು ಆ ಎರಡೂ ಹಬ್ಬಗಳನ್ನು ಆಚರಿಸುತ್ತೇನೆ. ಅವರ ಮನೆ ಕಾರ್ಯಕ್ರಮಗಳಿಗೆ ನಾವೆಲ್ಲಾ ಹೋಗುತ್ತಿದ್ದೆವು ಆವಾಗ ಪುಂಡಲಿಕ ರವರ ಸಹೋದರಿಯೂ ಇರುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನಿನ ಆಸೆಗಾಗಿ, ಏನಾದರೂ ಮಾಡಿ ಜಮೀನು

ಪಡೆದುಕೊಳ್ಳೋಣಾ ಎಂಬ ಆಸೆಗಾಗಿ ನಾನು ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಶೆವ್ಹಿ ಅಲಿಯಾಸ ದೇವಕಿ ನನ್ನ ತಾಯಿ. ಅವರಿಗೂ ಪ್ರತಿವಾದಿಗೂ, ಕೋಯರ್ ಅಥವಾ ಪುಂಡಲಿಕನ ಕುಟುಂಬಕ್ಕೂ ಯಾವದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ
Sd/-
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಕಾರವಾರ.

ಮೂಲ ದಾವಾ ನಂಃ 12/2020

ಪಿ.ಡಬ್ಲ್ಯೂಃ 06

( ಇಂದು ದಿನಾಂಕಃ 06.12.2024 ರಂದು ಪಿ ಡಬ್ಲು 6 ರವನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಆರ್. ಎಸ್. ಎಚ್. ಜೆ. ರವರಿಂದಃ**

ನನಗೆ ಈಗ 41 ವರ್ಷ ವಯಸ್ಸು. ಮದುವೆಯಾಗಿ 20 ವರ್ಷ ಕಳೆದಿದೆ. ನನ್ನ ಗಂಡನ ಊರು ಕೋಡಿಬಾಗ. ಈ ದಾವೆ ಜಾಗದ ಬಗ್ಗೆ ಮಾಡಿರುತ್ತಾರೆ. ಈ ದಾವೆ ವಿಜಯ ವಾಗಳೇಕರ ಮತ್ತು ಲಕ್ಷ್ಮಣ ಕೊಳಂಬಕರ ರವರ ನಡುವೆ ಇರುತ್ತದೆ. ಅದಕ್ಕೆ ನನಗೆ ಸಾಕ್ಷಿ ಹೇಳಲು ಕರೆದಿದ್ದರು.

2. ಕೋಡಿಬಾಗದಿಂದ ಹೊಸಾಳಿಗೆ 4 ಕಿ ಮೀ ದೂರ ಇದೆ. ಸಾಕ್ಷಿ ಮುದುವರಿದು ನನಗೆ ಸರಿಯಾಗಿ ಗೊತ್ತಿಲ್ಲ ಅಂತಾ ಉತ್ತರಿಸುತ್ತಾರೆ. ನನ್ನ ಗಂಡನ ಮನೆಯಲ್ಲಿ ಮನೆ ಮತ್ತು ಜಮೀನು ಇದೆ. ಅದನ್ನು ನಾನು ಹಾಗೂ ನನ್ನ ಮನೆಯವರು ಸಾಗುವಳಿ ಮಾಡಿ ನೋಡಿಕೊಳ್ಳುತ್ತೇವೆ. ಪುಂಡಲಿಕ ಜೀವಂತ ಇರುವುದಿಲ್ಲ. ಅವರು ತೀರಿಕೊಂಡು ಸುಮಾರು ವರ್ಷ ಕಳೆದಿರಬೇಕು. ನನ್ನ ಅಜ್ಜಿಯ ಮನೆ ಹೊಸಾಳಿ. ನಾನು ಅಲ್ಲಿಗೆ ಹೋಗಿ ಬರುತ್ತಾ ಇದ್ದೆ. ಆದ್ದರಿಂದ ನನಗೆ ಗೊತ್ತು, ಮಾತ್ರವಲ್ಲ ನನ್ನ ಅಮ್ಮನ ಕಡೆಯಿಂದಲೂ ನಾನು ಕೇಳಿದ್ದೆ. ಪುಂಡಲಿಕ ರವರಿಗೆ ಹೆಂಡತಿ ಮಕ್ಕಳು ಇದ್ದರು. ಅವರ ಹೆಂಡತಿಯ ಹೆಸರು ಗೊತ್ತಿಲ್ಲ, ಅವರಿಗೆ 7 ಮಕ್ಕಳು ಇರುವ ವಿಷಯ ನನಗೆ ಗೊತ್ತಿದೆ. ಅವರೆಂದರೆ ಮಿಲನ್ , ಬೇಬಿ, ಲಲಿತಾ, ದಿಗಂಬರ ಎಂಬವರ ಹೆಸರು ಗೊತ್ತಿದೆ. ಅವರು ಏನೆಲ್ಲಾ ಹಬ್ಬಗಳನ್ನು ಆಚರಿಸುತ್ತಿದ್ದರು ಎಂಬುದು ನನಗೆ ಗೊತ್ತಿಲ್ಲ.

3. ಅವರ ಮನೆ ಕಾರ್ಯಕ್ರಮಗಳಿಗೆ ನಾವೆಲ್ಲಾ ಹೋಗುತ್ತಿದ್ದೆವು ಆವಾಗ ಪುಂಡಲಿಕ ರವರ ಸಹೋದರಿಯೂ ಇರುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನಿನ ಆಸೆಗಾಗಿ, ಏನಾದರೂ ಮಾಡಿ ಜಮೀನು ಪಡೆದುಕೊಳ್ಳೋಣಾ ಎಂಬ ಆಸೆಗಾಗಿ ನಾನು ಸುಳ್ಳು ದಾವೆ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಶೆವ್ವಿ ಅಲಿಯಾಸ ದೇವಕಿ ನನ್ನ ತಾಯಿ.

ಅವರಿಗೂ ಪ್ರತಿವಾದಿಗೂ, ಕೋಯರ್ ಅಥವಾ ಪುಂಡಲಿಕನ ಕುಟುಂಬಕ್ಕೂ ಯಾವದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

4. ನಾನು ಈ ದಾವೆಯಲ್ಲಿ ಪಕ್ಷಗಾರಳಲ್ಲ. ನಾನು ವಾದಿಯ ಮಾತು ಕೇಳಿಕೊಂಡು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

Sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಕಾರವಾರ.